## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 663 |
| ಮಾನ್ಯ ಸದಸ್ಯರ ಹೆಸರು | ಡಾ: ಎಂ.ಜಿ.ಮುಳೆ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 21-08-2026 |
| ಉತ್ತರಿಸುವ ಸಚಿವರು | ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಆಹಾರ ಮತ್ತು ಹೆಲ್ತ್ ಸಪ್ಲಿಮೆಂಟ್ ಕಂಪನಿಗಳು ತಪ್ಪು ಮಾಹಿತಿ ನೀಡುವುದು FSSAI ನಿಯಮ ಉಲ್ಲಂಘಿಸಿ ಗ್ರಾಹಕರನ್ನು ದಾರಿ ತಪ್ಪಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಆರ್ಗ್ಯಾನಿಕ್ ಹಾಗು ಜೀರೋ ಮೈದಾ ನಂತಹ ಅತಿರಂಜಿತ ಪದ ಬಳಸಿ ಸಾರ್ವಜನಿಕರ ಆರೋಗ್ಯದ ಜೊತೆ ಚೆಲ್ಲಾಟವಾಡುವುದನ್ನು ತಡೆಗಟ್ಟುವ ಕುರಿತು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (FSSAI) ರವರು ಸಂಬಂಧಪಟ್ಟ ಆಹಾರ ಉದ್ದಿಮೆಗಳಿಗೆ ನೋಟಿಸ್ ಅನ್ನು ಜಾರಿಗೊಳಿಸಿರುತ್ತಾರೆ. |
| ಆ) | ಆರ್ಗ್ಯಾನಿಕ್ ಹಾಗೂ ಜೀರೋ ಮೈದಾ ನಂತಹ ಅತಿರಂಜಿತ ಪದ ಬಳಸಿ ಸಾರ್ವಜನಿಕರ ಆರೋಗ್ಯದ ಜೊತೆ ಚೆಲ್ಲಾಟವಾಡುವುದನ್ನು ತಡೆಯಲು ಆಹಾರ ಸುರಕ್ಷತಾ ಇಲಾಖೆ ಕೈಗೊಂಡಿರುವ ಕ್ರಮಗಳೇನು; | |
| ಇ) | ಕಳೆದ 3 ವರ್ಷಗಳಲ್ಲಿ ನಿಯಮ ಉಲ್ಲಂಘಿಸಿದ ಕಂಪನಿಗಳ ವಿರುದ್ಧ ದಾಖಲಾದ ಪ್ರಕರಣಗಳೆಷ್ಟು ಹಾಗೂ ವಿಧಿಸಲಾದ ದಂಡ/ಪರವಾನಗಿ ರದ್ದುಗೊಳಿಸಿದ ವಿವರ ನೀಡುವುದು; | ಕಳೆದ ಮೂರು ವರ್ಷಗಳಲ್ಲಿ Misbranded ಆಹಾರ ಪದಾರ್ಥಗಳಿಗೆ ಸಂಬಂಧಿಸಿದಂತೆ **96** ಪ್ರಕರಣಗಳನ್ನು ದಾಖಲಿಸಿದ್ದು, ರೂ.**20,26,500/-**ಗಳ ದಂಡವನ್ನು ವಿಧಿಸಲಾಗಿರುತ್ತದೆ.<br><br>ಅಸುರಕ್ಷಿತ/Substandard/Misbranded ಎಂದು ಕಂಡುಬಂದ ಆಹಾರ ಮಾದರಿಗಳ ಸಂಸ್ಥೆಯ ಆಹಾರ ಪರವಾನಗಿಯನ್ನು ಅಮಾನತ್ತುಗೊಳಿಸುವ/ ರದ್ದುಗೊಳಿಸುವ ಅವಕಾಶ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006, ನಿಯಮ 2011ರಡಿ ಇರುವುದಿಲ್ಲ. |
| ಈ) | 'ಆರೋಗ್ಯಕರ' ಎಂಬ ಪದಬಳಕೆಗೆ 'ಕಡ್ಡಾಯ ಪೂರ್ವ ಅನುಮೋದನೆ ನೀತಿ' ತರಲು ಕೇಂದ್ರಕ್ಕೆ ಶಿಫಾರಸ್ಸು ಮಾಡಲು ಹಾಗೂ ಪೌಷ್ಠಿಕಾಂಶಗಳ | ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (FSSAI) ವತಿಯಿಂದ ಆಹಾರ ಉತ್ಪನ್ನಗಳ ಲೇಬಲಿಂಗ್ ಮತ್ತು ಜಾಹೀರಾತುಗಳಿಗೆ ಸಂಬಂಧಿಸಿದಂತೆ ಈಗಾಗಲೇ ನಿಗದಿತ ನಿಯಮಗಳು ಜಾರಿಯಲ್ಲಿವೆ. ಆಹಾರ ಉತ್ಪನ್ನಗಳ ಲೇಬಲ್‌ನಲ್ಲಿ "ಆರೋಗ್ಯಕರ" (Healthy) ಸೇರಿದಂತೆ ಆರೋಗ್ಯಕ್ಕೆ ಸಂಬಂಧಿಸಿದ ಯಾವುದೇ ಹೇಳಿಕೆಗಳನ್ನು ನಿಯಮಾನುಸಾರವಾಗಿ ಮಾತ್ರ ಬಳಸುವಂತೆ Food Safety and |

| | | |
|---|---|---|
| | ವಿವರವನ್ನು ಪ್ಯಾಕೆಟ್‌ನ ಮುಂಭಾಗದಲ್ಲೇ ಕಡ್ಡಾಯವಾಗಿ ಪ್ರದರ್ಶಿಸಲು ಸರ್ಕಾರ ಸಿದ್ಧವಿದೆಯೇ? | Standards (Advertising and Claims) Regulations, 2018 ಹಾಗೂ Food Safety and Standards (Labelling and Display) Regulations, 2020ರಲ್ಲಿ ಸೂಕ್ತ ನಿಬಂಧನೆಗಳನ್ನು ಮಾಡಲಾಗಿರುತ್ತದೆ.<br><br>"ಆರೋಗ್ಯಕರ" ಎಂಬ ಪದಬಳಕೆಗೆ ಕಡ್ಡಾಯ ಪೂರ್ವಾನುಮೋದನೆ ನೀಡುವ ಪ್ರತ್ಯೇಕ ನೀತಿಯನ್ನು ಜಾರಿಗೆ ತರುವ ಅಧಿಕಾರ ಹಾಗೂ ಪ್ಯಾಕೆಟ್‌ನ ಮುಂಭಾಗದಲ್ಲೇ ಕಡ್ಡಾಯವಾಗಿ ಪ್ರದರ್ಶಿಸುವ ಸಂಬಂಧ ನಿಯಮಗಳನ್ನು ತಿದ್ದುಪಡಿ ಮಾಡುವ ಅಧಿಕಾರ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (FSSAI), ನವದೆಹಲಿ ರವರ ವ್ಯಾಪ್ತಿಗೆ ಒಳಪಡುತ್ತದೆ. |

ಸಂಖ್ಯೆ: HFW 103 SBV 2026

(ಯು.ಟಿ ಖಾದರ್ ಫರೀದ್)
ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್
ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು